


ಸಾಮಾನ್ಯರಲ್ಲಿ ಮತ್ತು ಸರ್ಕಾರಿ ವಲಯಗಳಲ್ಲಿ ಹೆಚ್ಚಿನ ಚರ್ಚೆ ನಡೆಯುತ್ತಿದೆ. ಸ್ತ್ರೀ ಜಾಗೃತಿಯ ಮೂರನೇ ಅಲೆಯಲ್ಲಿ 'ಮುಟ್ಟಿನ ರಜೆ'ಯ ವಿಷಯ ಮುಂಚೂಣಿಯಲ್ಲಿದೆ. ಹಲವಾರು ದೇಶಗಳಲ್ಲಿ ಈಗಾಗಲೇ ಮುಟ್ಟಿನ ರಜೆ ಜಾರಿಯಲ್ಲಿದೆ.

## 'ಮುಟ್ಟಿನ ರಜೆ' ಘೋಷಿಸಿರುವ ದೇಶಗಳು

'ಮುಟ್ಟಿನ ರಜೆ' ಕುರಿತ ಚರ್ಚೆ 1920ರಲ್ಲೇ ಜಪಾನ್‌ನಲ್ಲಿ ನಡೆಯುತ್ತಿತ್ತು. ಮುಟ್ಟಿನ ರಜೆಯನ್ನು ಮಹಿಳೆಯ ಹಕ್ಕೆಂದು ಅಂಗೀಕರಿಸಿದ ಅಲ್ಲಿನ ಸರ್ಕಾರ 1947ರಲ್ಲಿ ಜಪಾನಿನ 'ಲೇಬರ್ ಲಾ' ಮೂಲಕ ಇದನ್ನು ಸಿಂಧುಗೊಳಿಸಿತು. ಮಹಿಳೆಯರ ಮುಟ್ಟಿನ ದಿನಗಳಲ್ಲಿ ಅವರನ್ನು ಯಾರೂ ಕೆಲಸ ಮಾಡುವಂತೆ ಒತ್ತಾಯ ಮಾಡುವಂತಿಲ್ಲ ಎಂಬ ಕಟ್ಟಾಜ್ಞೆಯನ್ನು ಹೊರಡಿಸಿತು. ಅಲ್ಲಿನ ಮಹಿಳೆಯರು ಕಳೆದ 77 ವರ್ಷಗಳಿಂದಲೂ ಮುಟ್ಟಿನ ರಜೆಯನ್ನು ಅಗತ್ಯಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದ್ದಾರೆ. ಆದರೆ, ಈ ದಿನಗಳಲ್ಲಿ ಕಡ್ಡಾಯ ವೇತನ ನೀಡಬೇಕೆಂದಾಗಲೀ, ರಜೆ ತೆಗೆದುಕೊಳ್ಳದೆ ಕೆಲಸ ಮಾಡಿದರೆ ದುಪ್ಪಟ್ಟು ವೇತನ ಕೊಡುವುದನ್ನಾಗಲೀ ಜಪಾನ್ ಮಾಡುವುದಿಲ್ಲ.

ಸ್ಪೇನ್ ದೇಶದಲ್ಲಿ ಮಹಿಳೆಯರು ಅವರಿಗೆ ಎಷ್ಟು ದಿನಗಳ ಅಗತ್ಯವಿದೆಯೋ ಅಷ್ಟು ದಿನಗಳ ರಜೆಯನ್ನು ತೆಗೆದುಕೊಳ್ಳಬಹುದು. ದೇಶದ ಸೋಷಿಯಲ್ ಸೆಕ್ಯೂರಿಟಿ ವ್ಯವಸ್ಥೆ ಮುಟ್ಟಿನ ರಜೆಯ ವೇತನವನ್ನು ಭರಿಸುತ್ತದೆ. ಆದರೆ, ಈ ರಜೆಗೆ ವೈದ್ಯರ ಪ್ರಮಾಣ ಪತ್ರವನ್ನು ಕಡ್ಡಾಯಗೊಳಿಸಿದೆ. ಜೊತೆಗೆ ಇಂತಿಂಥದ್ದೇ ತೊಂದರೆಯಿದ್ದವರಿಗೆ ಮಾತ್ರ ವೈದ್ಯರ ಪ್ರಮಾಣ ಪತ್ರ ದೊರೆಯುವಂತೆ ಕಾನೂನಿನ ಬಳಕೆಯನ್ನು ಮಿತಗೊಳಿಸಿದೆ.

ವಿಯೆಟ್ನಾಂ ದೇಶದ ಕಾರ್ಮಿಕರ ಕಾನೂನು, ತಿಂಗಳಿಗೆ ಮೂರು ದಿನಗಳ ಮುಟ್ಟಿನ ರಜೆ ನೀಡುತ್ತಿದೆ. ಮುಟ್ಟಿನ ಕಾಲಾವಧಿಯ ಇತರೆ ದಿನಗಳಲ್ಲಿಯೂ ಅರ್ಧ ಗಂಟೆ ವಿಶ್ರಾಂತಿ ಪಡೆಯಬಹುದು ಎಂದು ಹೇಳಿದೆ. ಮುಟ್ಟಿನ ಸಮಯದಲ್ಲಿ ಮಹಿಳೆಯರೇನಾದರೂ ಕೆಲಸ ಮಾಡಿದರೆ ದುಪ್ಪಟ್ಟು ವೇತನ ನೀಡುತ್ತದೆ.

ಫಿಲಿಪ್ಪೀನ್ಸ್‌ನಲ್ಲಿ ವೇತನ ಸಹಿತ ಎರಡು ದಿನಗಳ ರಜೆ ದೊರೆಯುತ್ತಿದೆ. ಇಂಡೊನೇಷಿಯಾ ದೇಶ ಮುಟ್ಟಿನ ವಯೋಮಾನದ ಮಹಿಳೆಯರಿಗೆ 2 ದಿನಗಳ ಮುಟ್ಟಿನ ರಜೆಯನ್ನು 2003ರಿಂದಲೇ ನೀಡುತ್ತಿದೆ. ಇದು ಸಂತಾನೋತ್ಪತ್ತಿ ಮಾಡಬಲ್ಲ ಮಹಿಳೆಯರ ಆರೋಗ್ಯವನ್ನು ಕಾಪಾಡುವ ಕಾನೂನುಗಳಲ್ಲಿ ಒಂದಾಗಿದೆ.

ದಕ್ಷಿಣ ಕೊರಿಯಾ ಕೂಡ ಮಹಿಳೆಯರಿಗೆ ಮುಟ್ಟಿನ ರಜೆಯನ್ನು ಅಧಿಕೃತಗೊಳಿಸಿದೆ. ರಜೆ ತೆಗೆದುಕೊಳ್ಳದ ಮಹಿಳೆಯರಿಗೆ ಹೆಚ್ಚಿನ ವೇತನವನ್ನು ನೀಡುತ್ತದೆ. ತೈವಾನ್ ದೇಶದಲ್ಲಿಯೂ ಮಹಿಳೆಯರಿಗೆ ಮುಟ್ಟಿನ ರಜೆ ದೊರಕುತ್ತದೆ. ಆದರೆ ವರ್ಷಕ್ಕೆ ಕೇವಲ ಮೂರು ದಿನಗಳ ಹೆಚ್ಚುವರಿ ರಜೆಯನ್ನು ವೇತನ ಸಹಿತ ನೀಡಲಾಗುತ್ತಿದೆ.

ಆಫ್ರಿಕಾದ ಝಾಂಬಿಯಾ ದೇಶದಲ್ಲಿ 2015ರಿಂದ ಪ್ರತಿ ತಿಂಗಳೂ ಒಂದು ದಿನದ ಮುಟ್ಟಿನ ರಜೆ ಸಿಗುತ್ತಿದೆ. 'ಮಾತೆಯರ ದಿನ' ಎಂದು ಕರೆಯಲಾಗುವ ಈ ರಜೆಯನ್ನು ಉದ್ಯೋಗದಾತರು ನೀಡದಿದ್ದರೆ, ಅವರ ಮೇಲೆ ದೂರು ಸಲ್ಲಿಸಬಹುದಾಗಿದೆ.

ಉದ್ಯೋಗದಾತರು ತಮ್ಮ ಉದ್ಯೋಗಿಗಳಿಗೆ ಮುಟ್ಟಿನ ರಜೆಯನ್ನು ಒದಗಿಸಬಹುದಾದರೂ, ಕೊಡಲೇಬೇಕೆಂಬ ನಿಯಮ ಭಾರತದಲ್ಲಿಲ್ಲ. ತಾಯ್ತನದ ಸದುಪಯೋಗಕ್ಕಾಗಿ 1961ರಲ್ಲಿಯೇ ಕಾನೂನು (ಮೆಟರ್ನಿಟಿ ಬೆನಿಫಿಟ್ ಆ್ಯಕ್ಟ್) ಬಂದಿತಾದರೂ, ಅದರಲ್ಲಿ ಮುಟ್ಟಿನ ದಿನಗಳಿಗಾಗಿ ಯಾವುದೇ ರಿಯಾಯಿತಿಯನ್ನು ತೋರಿಸಿಲ್ಲ. ಆದರೆ, ಕೆಲವು ರಾಜ್ಯಗಳಲ್ಲಿ ಮಹಿಳೆಯರ ಮುಟ್ಟಿಗೆ ರಜೆಯಿದೆ.

ಬಿಹಾರ ರಾಜ್ಯದಲ್ಲಿ ಮುಟ್ಟಿನ ರಜೆಗೆ ಅವಕಾಶವಿದೆ. 1992ರಿಂದ ಬಿಹಾರದಲ್ಲಿ ಮುಟ್ಟಿನ ಎರಡು ದಿನಗಳ ಕಾಲದ ವೇತನ ಸಹಿತ ರಜೆಯನ್ನು ತೆಗೆದುಕೊಳ್ಳಬಹುದಾಗಿದೆ. ಕೇರಳದ ಒಂದು ಶಾಲೆ 1912ರಲ್ಲಿಯೇ ಮಕ್ಕಳಿಗೆ ಮುಟ್ಟಿನ ರಜೆಯನ್ನು ನೀಡಿತು. ಇದೀಗ ಕೇರಳದ ಶಾಲಾ–ಕಾಲೇಜುಗಳಲ್ಲಿ ಮುಟ್ಟಿನ ರಜೆಯನ್ನು ಪಡೆಯಬಹುದಾಗಿದೆ. ಆದರೆ ಈ ರಜೆಗಳನ್ನು ಹೊರತುಪಡಿಸಿಯೂ ಶೇ. 73 ಹಾಜರಾತಿ ಕಡ್ಡಾಯವಾಗಿ ಬೇಕೆಂಬ ನಿಯಮ ಜಾರಿಯಲ್ಲಿದೆ. ಒಡಿಶಾ ರಾಜ್ಯ ಇಡೀ ಭಾರತದಲ್ಲಿ ಸರ್ಕಾರಿ ಮತ್ತು ಖಾಸಗಿ ಎರಡೂ ವಲಯಗಳಲ್ಲಿ ಮುಟ್ಟಿನ ರಜೆಯನ್ನು ಜಾರಿಗೊಳಿಸಿದ ಪ್ರಥಮ ರಾಜ್ಯವೆನಿಸಿದೆ. ಮಹಾರಾಷ್ಟ್ರ 'ಶಾಪ್ಸ್ ಮತ್ತು ಎಸ್ಟಾಬ್ಲಿಷ್‌ಮೆಂಟ್ ಆ್ಯಕ್ಟ್'ಗೆ ತಿದ್ದುಪಡಿ ಸೂಚಿಸಲು 2023ರಲ್ಲಿ ಅಧಿಸೂಚನೆ ಹೊರಡಿಸಿದೆ. ಸಿಕ್ಕಿಂ ಹೈಕೋರ್ಟ್‌ನಲ್ಲಿ ಕೆಲಸ ಮಾಡುವ ಮಹಿಳಾ ಸಿಬ್ಬಂದಿ ವೈದ್ಯರ ಶಿಫಾರಸ್ಸಿನ ಮೇರೆಗೆ ಪ್ರತಿ ತಿಂಗಳು 2–3 ದಿನಗಳವರೆಗೆ ವೇತನ ಸಹಿತ ರಜೆ ಪಡೆಯಬಹುದಾಗಿದೆ.

ಮುಟ್ಟಿನ ರಜೆಯನ್ನು ಅಂಗೀಕರಿಸಬೇಕೆಂದು ಈ ಹಿಂದೆ ಲೋಕಸಭೆಯಲ್ಲಿ ಮಂಡಿಸಲಾಗಿದ್ದ **Menstruation Benefits Bill 2017** ಮತ್ತು **Women's sexual, reproductive and menstrual leave 2018** ಎರಡೂ ಕರಡು ಮಸೂದೆಗಳು ತಿರಸ್ಕೃತಗೊಂಡವು. ಆ ನಂತರ